ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 1-11
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸವಿತಾ ನಾಗಭೂಷಣ ಅವರ 'ದೇವರಿಗೆ ಹೋದೆವು' ಮತ್ತು 'ಜಾತ್ರೆಯಲ್ಲಿ ಶಿವ' ಕವನ ಸಂಕಲನಗಳಲ್ಲಿ ಆಯ್ದ ಕವಿತೆಗಳ ವಿಶ್ಲೇಷಣೆ

**ಮಹದೇವ[1] & ಡಾ. ಎಂ.ಎನ್. ನಂದೀಶ[2]**

[1]ಸಂಶೋಧನಾ ವಿದ್ಯಾರ್ಥಿ & [2]ಸಹಾಯಕ ಪ್ರಾಧ್ಯಾಪಕರು

ಕನ್ನಡ ವಿಭಾಗ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು (ಸ್ವಾಯತ್ತ), ಮೈಸೂರು.

***Abstract:***

*ಆಧುನಿಕ ಸಾಹಿತ್ಯದ ಅತ್ಯಂತ ಮಹತ್ವದ ಲೇಖಕಿಯರಲ್ಲಿ ಸವಿತಾ ನಾಗಭೂಷಣ ಅವರು ಪ್ರಮುಖವಾಗಿ ಕಾಣಿಸಿಕೊಳ್ಳುತ್ತಾರೆ. ಕಳೆದ ಮೂವತ್ತು ವರ್ಷಗಳಿಂದ ಸಾಹಿತ್ಯದ ಕೃಷಿ ಮಾಡುತ್ತಿರುವ ಅವರು ಕಾವ್ಯ ಪ್ರಬಂಧ ಕಾದಂಬರಿ ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತಮ್ಮ ಜೀವನದ ಅನುಭವಗಳನ್ನು ಮೂಡಿಸುತ್ತ ಸಮಾಜವನ್ನು ಎಚ್ಚರಿಸುವ ಕೆಲಸ ಮಾಡುತ್ತಿದ್ದಾರೆ. ಅವರ ಬರಹದ ಪ್ರಾಮಾಣಿಕತೆ ಪ್ರಬುದ್ಧತೆ ಹಾಗೂ ಕಲಾತ್ಮಕತೆಗಾಗಿ ಕನ್ನಡ ಸಾಹಿತ್ಯದಲ್ಲಿ ಓದುಗರ ಗಮನ ಸೆಳೆದ ಪ್ರತಿಭಾನ್ವಿತ ಲೇಖಕಿ. ಸವಿತಾ ನಾಗಭೂಷಣ ಅವರು ಕವನ ಸಂಕಲನ, ಕಾದಂಬರಿ, ವಿಮರ್ಶಾ ಲೇಖನಗಳನ್ನು ಬರೆದಿದ್ದಾರೆ. ಪ್ರಸ್ತುತ ಲೇಖನದಲ್ಲಿ ಅವರ 'ದೇವರಿಗೆ ಹೋದೆವು' ಮತ್ತು 'ಜಾತ್ರೆಯಲ್ಲಿ ಶಿವ' ಕವನ ಸಂಕಲನಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿರುವ ಅನೇಕ ಕವನಗಳು ಅವರ ಅಂತಃಕರಣದ ಭಾವವನ್ನು ಅಭಿವ್ಯಕ್ತಗೊಳಿಸುವ ಸಾಮಾನ್ಯ ಓದುಗನಿಗೂ ಸಹಜವಾಗಿ ತಲುಪುವ ರಚನೆಗಳಾಗಿವೆ.*

**Keywords:** *ಕನ್ನಡ ಸಾಹಿತ್ಯ, ಸವಿತಾ ನಾಗಭೂಷಣ, ದೇವರಿಗೆ ಹೋದೆವು, ಜಾತ್ರೆಯಲ್ಲಿ ಶಿವ.*

## ಪೀಠಿಕೆ

ದೇವನೂರ ಮಹಾದೇವ ಹೇಳುವಂತೆ "ಸವಿತಾ ನಾಗಭೂಷಣ ಅವರ ಕಾವ್ಯ ತಂಗಾಳಿಯಂತೆ" ಎಂಬುದು ಒಪ್ಪತಕ್ಕ ಮಾತು ತಂಗಾಳಿ ಎಂದಿಗೂ ಬಲವಾಗಿ ಬೀಸುವುದಿಲ್ಲ. ತಂಗಾಳಿಯನ್ನು ಕುರಿತು ಮನುಷ್ಯನ ಹಂಬಲವನ್ನು ನಿರೀಕ್ಷೆಯನ್ನು ಹೆಚ್ಚಿಸುತ್ತದೆ. ಮಾತ್ರವಲ್ಲ ತಂಗಾಳಿಯ ಮಹತ್ವವನ್ನು ಹೆಚ್ಚಿಸುತ್ತದೆ ಸವಿತಾನಾಗಭೂಷಣ ಅವರ ಕಾವ್ಯವನ್ನು ಕುರಿತಂತೆ ಎಲ್ಲರಿಗೂ ಇರುವ ಪ್ರೀತಿಯನ್ನು ಭರವಸೆಯನ್ನು ಅವರ ಕಾವ್ಯದ ಮಹತ್ವವನ್ನು ಇದಕ್ಕಿಂತೆ ಸಂಕ್ಷಿಪ್ತವಾಗಿ ಹೇಳಲು ಸಾಧ್ಯವಿಲ್ಲವೇನೂ."[1]

ಕನ್ನಡ ಸಾಹಿತ್ಯದ ವ್ಯಾಪ್ತಿ ಅದನ್ನು ಅಭ್ಯಸಿಸುವ ದೃಷ್ಟಿಕೋನ ಅದರ ನೆಲೆಗಟ್ಟು ಎಲ್ಲವೂ ವಿಶಾಲವಾಗಿ ಹರಡಿಕೊಂಡಿದೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಇಂದು ಸಾಹಿತ್ಯ ಕೃಷಿ ನಡೆಯುತ್ತಿದೆ. ಪುರುಷ ಪ್ರಧಾನ ಸಾಹಿತ್ಯ, ಸ್ತ್ರೀ ಪ್ರಧಾನ ಸಾಹಿತ್ಯ ಹೀಗೆ ಸಾಹಿತ್ಯದ ಕವಲುಗಳನ್ನು ಇಲ್ಲಿ ನಾವು ಕಾಣಬಹುದು, ಪುರುಷರು ರಚಿಸಿರುವ ಸಾಹಿತ್ಯದಲ್ಲಿ ಸ್ತ್ರೀ ನಿಷ್ಠ ಚಿಂತನೆಯನ್ನು ಗುರುತಿಸಬಹುದು. ಆದರೆ ಸ್ತ್ರೀ ನಿಷ್ಠ ಚಿಂತನೆಯಲ್ಲಿ ಕಂಡು ಬರುವ ವ್ಯಾಪಕವಾದ

***Please cite this article as:*** ಮಹದೇವ್ & ಎಂ.ಎನ್. ನಂದೀಶ. (2023). ಸವಿತಾ ನಾಗಭೂಷಣ ಅವರ 'ದೇವರಿಗೆ ಹೋದೆವು' ಮತ್ತು 'ಜಾತ್ರೆಯಲ್ಲಿ ಶಿವ' ಕವನ ಸಂಕಲನಗಳಲ್ಲಿ ಆಯ್ದ ಕವಿತೆಗಳ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 2(5), 1–11.

ಚಿಂತನೆಯನ್ನು ಪುರುಷ ಪ್ರಧಾನ ರಚನೆಗಳಲ್ಲಿ ಕಾಣಲು ಸಾಧ್ಯವಿಲ್ಲ.

ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯಕ್ಕೆ ಹಾಗೂ ಸ್ತ್ರೀ ನಿಷ್ಠ ಚಿಂತನೆಗೆ ಸವಿತಾ ನಾಗಭೂಷಣ ಅವರ ಕೊಡುಗೆ ಅಪಾರ ಆಧುನಿಕ ಸಾಹಿತ್ಯದ ಮಹತ್ವ ಲೇಖಕಿಯರಲ್ಲಿ ಇವರು ಪ್ರಮುಖವಾಗಿ ಗುರುತಿಸಿಕೊಳ್ಳುತ್ತಾರೆ. ಸುಮಾರು ಕಳೆದ ನಲವತ್ತು ವರ್ಷಗಳಿಂದ ಗದ್ಯ, ಕಾದಂಬರಿ, ವಿಮರ್ಶಾ ಲೇಖನಗಳು ಕಥೆಗಳು ಹಾಗೂ ವಿಚಾರ ಸಾಹಿತ್ಯ ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ತಮ್ಮ ಸಾಹಿತ್ಯದ ಅಭಿವ್ಯಕ್ತಿಯನ್ನು ಮೂಡಿಸುತ್ತಾ ಬಂದಿದ್ದಾರೆ. ತಮ್ಮ ಬರಹದ ಮೂಲಕ ಪ್ರಸಿದ್ಧಿ ಪಡೆದ ಲೇಖಕರು ತಮ್ಮ ಬರಹದ ಪ್ರಾಮಾಣಿಕತೆ ಪ್ರಬುದ್ಧತೆ ಹಾಗೂ ಕಲಾತ್ಮಕತೆಯಿಂದ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾರೆ.

"ಕಾವ್ಯ ಎನ್ನುವುದು ಬೀದಿಯ ಪಸರವೂ ತಗರ ಹೊರಟೆಯೂ ಆಗಿ ಬೀಡುತ್ತದೆಯೇನೋ ಎನ್ನುವ ಆತಂಕ ಎಲ್ಲಾ ಕಾಲದ ಕಾವ್ಯ ಪ್ರೇಮಿಗಳನ್ನು ಕಾಡುತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ಕಾವ್ಯದ ಬಗ್ಗೆ ನಂಬಿಕೆ ಹುಟ್ಟಿಸುತ್ತಿರುವ ಕವಿಗಳಲ್ಲಿ ಸವಿತಾನಾಗಭೂಷಣ ಅವರು ಮುಖ್ಯವಾಗಿ ಕಾಣಿಸಿಕೊಳ್ಳುತ್ತಾರೆ."[2]

ನಾ ಬರುತ್ತೇನೆ ಕೇಳು, ಚಂದ್ರನನ್ನು ಕರೆಯಿರಿ ಭೂಮಿಗೆ, ಹೊಳೆಮಗಳು, ಜಾತ್ರೆಯಲ್ಲಿ ಶಿವ, ದೇವರಿಗೆ ಹೋದೆವೂ, ಆಕಾಶ ಮಲ್ಲಿಗೆ, ದರುಶನ ಹೀಗೆ ಏಳು ಕವನ ಸಂಕಲನಗಳು ಹಾಗೂ 'ಸ್ತ್ರೀಲೋಕ' ಎಂಬ ಕಾದಂಬರಿ ಕೂಡ ಬರೆದಿದ್ದಾರೆ. ಇವರ ಸ್ತ್ರೀಲೋಕ ಒಂದು ವಿಶಿಷ್ಟ ಪ್ರಯೋಗದೆನಿಸಿದ್ದು ಹಲವು ಪುರಸ್ಕಾರಗಳನ್ನು ಪಡೆದಿದೆ.

ಪ್ರಸ್ತುತ 'ದೇವರಿಗೆ ಹೋದೆವು' ಮತ್ತು 'ಜಾತ್ರೆಯಲ್ಲಿ ಶಿವ' ಕವನ ಸಂಕಲನಗಳನ್ನು ಈ ಲೇಖನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇಲ್ಲಿರುವ ಅನೇಕ ಕವನಗಳು ಅವರ ಅಂತಃಕರಣದ ಭಾವವನ್ನು ಅಭಿವ್ಯಕ್ತಗೊಳಿಸುವ ಸಾಮಾನ್ಯ ಓದುವನಿಗೂ ಸಹಜವಾಗಿ ತಲುಪುವ ರಚನೆಗಳಾಗಿವೆ. ಬದುಕಿನ ಹಾದಿಯಲ್ಲಿ ಜತೆಗೂಡಿದ ಎಲ್ಲಾ ಜೀವಗಳಿಗೆ ಎಂದು ತಮ್ಮ ಕೃತಿಯನ್ನು ಅರ್ಪಿಸಿರುವ ಇವರ ಸಾಲುಗಳು ಕವನಗಳ ಜೀವಧ್ವನಿಯನ್ನು ಇಲ್ಲಿ ತಿಳಿಸುವಂತದ್ದೆ ಆಗಿದೆ. ಸುಮಾರು ತೊಂಭತ್ತು ಕವನಗಳ ಸಂಗ್ರಹವನ್ನು ಇವರ "ದೇವರಿಗೆ ಹೋದೇವು" ಕೃತಿ ಒಳಗೊಂಡಿದೆ.

ಮಲೆನಾಡಿನ ಅನುಭವದ ಹಿನ್ನೆಲೆಯಲ್ಲಿ ಅವರ ಬಹಳಷ್ಟು ಕವಿತೆಗಳಲ್ಲಿ ಗಿಡ–ಮರ, ಹಸಿರು–ಹೂ–ಹಣ್ಣು ಮತ್ತು ಹೊಳೆ–ಮಳೆ, ಮೋಡಗಳ ಜೀವಂತ ರೂಪಕ ಒಳಗೊಂಡಿರುತ್ತದೆ. ವರ್ತಮಾನದ ಮನುಷ್ಯನ ಆಳದ ಸಂತೋಷ–ನೆಮ್ಮದಿ, ದುಃಖ–ವಿಷಾದಗಳನ್ನು ಅಂತಃಕರಣ ಪೂರ್ವಕವಾಗಿ ದಾಖಲಿಸುತ್ತದೆ. ಕರ್ನಾಟಕ ಸಾಹಿತ್ಯ ಆಕಾಡೆಮಿಯೂ ಕಾವ್ಯಕ್ಕಾಗಿ ನೀಡುವ ಪ್ರಶಸ್ತಿ ಪಡೆದ ಮೊದಲ ಕವಯಿತ್ರಿಯಾದ (ನಾ ಬರುತ್ತೇನೆ ಕೇಳು) ಸವಿತಾ ನಾಗಭೂಷಣ ಅವರ ಎಲ್ಲಾ ಕವನ ಸಂಕಲನಗಳಿಗೆ ವಿವಿಧ ಸಂಘ ಸಂಸ್ಥೆಗಳ ಬಹುಮಾನ ಪ್ರಶಸ್ತಿ ಸಂದಿವೆ.

"ತಿಳಿದಂತೆ ಮಾಡು ನಡೆದಂತೆ ಜಾಡು ಎಂಬ ನಂಬಿಕೆಯಲ್ಲಿ ನಿರುಮ್ಮಳವಾಗಿ ಹರಿಯುವ ನದಿಯಂತೆ ಸವಿತಾ ನಾಗಭೂಷಣ ಅವರ ಕವಿತೆಗಳು ಕನ್ನಡ ಕಾವ್ಯ ಸಂದರ್ಭದಲ್ಲಿ ತಮ್ಮ ಅನನ್ಯ ಚಹರೆಗಳನ್ನು ಬಿಂಬಿಸಿವೆ. ಇವರ ಕವಿತೆಗಳಲ್ಲಿ ಆಶಯ ಮತ್ತು ಆಕೃತಿಗಳು ಬೇರೆಯಲ್ಲ. ಉಸಿರಾಟಕೊಂದು ಸಹಜ ಲಯವಿರುವಂತೆ ಹಜ್ಜೆ ಇಡುವ ಕ್ರಿಯೆಯಲ್ಲಿಯೇ ತಾಳ ಬೆರೆತಿರುವಂತೆ ಅವರ ದೇವರಿಗೆ ಹೋದೇವು' ಎಂಬ ಕವನ ಸಂಕಲನದ ಕವಿತೆಗಳಿವೆ. ಕಾವ್ಯದ–ನಗರದ ಸಿದ್ಧಮಾದರಿಗಳನ್ನು ಸದ್ದಿಲ್ಲದೆ ಮೀರುವುದು ಈ ಕಾವ್ಯದ ಅಭಿವ್ಯಕ್ತಿಯ ಶಕ್ತಿ ಸಿದ್ಧಾಂತಗಳ ಒಜ್ಜೆಯಿಲ್ಲದೆ, ಸಹಜ ಹರಿವಿನಲ್ಲಿ ಹಗುರವೂ ಸೂಕ್ಷ್ಮವೂ ಆದ ಕವಿತೆಗಳು ಒಳನೋಟದ ತಿಳಿವನ್ನು ತೋಡಿ, ಮೆಲ್ಲಗೆ ಅರುಹುತ್ತದೆ."[3]

ಸಮಾಜವಾದದ ಹಿನ್ನೆಲೆಯಲ್ಲಿ ಸವಿತಾ ನಾಗಭೂಷಣ ಅವರ ಕವಿತೆಗಳು ದೊಡ್ಡ ಕ್ರಾಂತಿಯನ್ನು ಸಾಹಿತ್ಯ ಲೋಕದಲ್ಲಿ ಉಂಟುಮಾಡುತ್ತವೆ. 'ಮಾರ್ಕ್ಸ್‌ವಾದ ಹೇಳುವಂತೆ ಒಬ್ಬ ಸಾಹಿತಿಯ ಕರ್ತವ್ಯ ಕೇವಲ ಸಾಹಿತ್ಯ ಸೃಷ್ಟಿ ಅಷ್ಟೇ ಅಲ್ಲ ಅವನು ತನ್ನ ಸುತ್ತಮುತ್ತಲಿನ ಸಮಾಜದ ಕೊಳೆಯನ್ನು ಮೇಲು ಕೀಳನ್ನು ಅಸಮಾನತೆಯನ್ನು ಹೋಗಲಾಡಿಸುವುದು ಅವನ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿರುತ್ತದೆ'. ಸವಿತಾ ನಾಗಭೂಷಣ ಅವರ ಈ ಸಂಕಲದ ಕವಿತೆಗಳು ಸಹ ಇದಕ್ಕೆ ಹೊರತಲ್ಲ. ಸಿದ್ದಗಂಗಾ ಶ್ರೀಗಳಿಗೆ ನಮನ, ಅಂಬೇಡ್ಕರ್ ಎಂಬ ಒಡವೆ, ಇರುವುದೇ ಧರ್ಮ? ಸಮಾನರು, ಇಂತಹ ಕವಿತೆಗಳಲ್ಲಿ ಸಾಮಾಜಿಕ ಸುಧಾರಣೆಯ ಮಹತ್ವ ಇರುವುದು ಕಂಡುಬರುತ್ತದೆ. ಕ್ರಿ.ಪೂ ದಿಂದ ಪ್ರಸ್ತುತ ದಿನಗಳವರೆಗೂ ಸಮಾಜ ಸುಧಾರಣೆಯ ಕಾರ್ಯಗಳಲ್ಲಿ ಹಲವು ನಾಯಕರು ತೊಡಗಿದ್ದಾರೆ. ಇಂತಹ ಬಹುತೇಕ ಅಂಶಗಳನ್ನು ತಮ್ಮ ಕವಿತೆಗಳಲ್ಲಿ ಬಿತ್ತರಿಸುವುದನ್ನು ಕಾಣುತ್ತವೆ.

ಸಮಾಜದಲ್ಲಿ ಶಾಂತಿ ನೆಲೆಸುವುದನ್ನು ಬಯಸುವುದು ಈ ಸಮಾಜದಲ್ಲಿ ಬದುಕುತ್ತಿರುವ ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿರುತ್ತದೆ. ಶಾಂತಿಯಿಂದಲೇ ಸಮೃದ್ಧಿಯ ಜೀವನ ಸಾಧ್ಯವಾಗುತ್ತದೆ. ಪ್ರಸ್ತುತ ಸಂಕಲನದಲ್ಲಿ ಅಂತಹ ಹಲವು ಕವಿತೆಗಳನ್ನು ಕಾಣುತ್ತೇವೆ. ಬಿಳಿಯ ಪಾರಿವಾಳ ಎಂಬ ಕವಿತೆಯ ಮೂಲಕ ಶಾಂತಿಯ ಸಂಕೇತವನ್ನು ಜಗತ್ತಿಗೆ ಸಾರುವ ಕಾಯಕವನ್ನು ಮಾಡಿದ್ದಾರೆ. 'ಬಿಳಿ'ಎಂಬ ಬಣ್ಣ ಶಾಂತಿಯ ಸಂಕೇತವಾದರೆ, 'ಪಾರಿವಾಳ' ಸಂದೇಶದ ಸಂಕೇತವಾಗಿ ಹೊರಹೊಮ್ಮಿದೆ ಯುದ್ಧ ಬೇಡ ಎಂದು ನೇರವಾಗಿ ಹೇಳುವ ದಿಟ್ಟ ಮನಸ್ಥಿತಿ ಸವಿತಾ ನಾಗಭೂಷಣ ಅವರ ಕವಿತೆಗಳಿಗೆ ಇದೆ. ಈ ಮೂಲ ಜಗತ್ತು ಹೇಗೆ ಸೌಹಾರ್ದಯುತವಾಗಿ ಬದುಕಬೇಕು ಎಂಬುದನ್ನು ಜಾಗೃತವಾಗುವ ಪರಿಯನ್ನು ತಿಳಿಸಿದ್ದಾರೆ. ಯುದ್ಧ, ಯುದ್ಧವಾದರೆ, ದ್ವೇಷ ಬಿತ್ತಬಾರದು. ಎಂಬ ಕವಿತೆಗಳು ಸಹ ಅದನ್ನು ಸಾರಿ ಸಾರಿ ಹೇಳುತ್ತವೆ. ಅದೇ ಸಾಲಿಗೆ ಸೇರುವ 'ಹೊಸಬಾಳು' ಯುದ್ಧವನ್ನು ತ್ಯಜಿಸಿ ಇಡೀ ಜಗತ್ತು ಹೊಸ ಆರಂಭದೊಂದಿಗೆ ಸೋದರತ್ವವನ್ನು ಬೆಸೆಯುವ ನಿಟ್ಟಿನಲ್ಲಿ ರಚನೆಯಾಗಿದೆ.

ಇವರ ದೇವರಿಗೆ ಹೋದೆವು ಸಂಕಲನದಿಂದ ಮೂರು ಕವಿತೆಗಳನ್ನು ಹಾಗೂ ಜಾತ್ರೆಯಲ್ಲಿ ಶಿವ ಸಂಕಲನದಿಂದ ಮೂರು ಕವಿತೆಯನ್ನು ಕುರಿತು ಚರ್ಚಿಸಲಾಗಿದೆ. ಕವಿತೆಗಳು ಎಲ್ಲ ಮಾದರಿಯ ವಿಚಾರಗಳನ್ನು ಒಳಗೊಂಡಿರುವುದಲ್ಲದೆ ಸಾಹಿತ್ಯ ಲೋಕಕ್ಕೆ ಹೊಸ ಹುರುಪನ್ನು ನೀಡುತ್ತವೆ. ದೇವರಿಗೆ ಹೋದೆವು ಸಂಕಲನದ ದೇವರಿಗೆ ಹೋದೆವು ಎಂಬ ಕವಿತೆ ಅಂತಹದೇ ಸಾಲಿಗೆ ಸೇರುತ್ತದೆ. ಧಾರ್ಮಿಕ ವಿಚಾರ ಕೆಲವೊಮ್ಮೆ ಬದಲಾವಣೆಯ ಸಂಕೇತ ಎಂಬುದನ್ನು ಈ ಕವಿತೆ ಸಾರ್ಥಕ ಪಡಿಸುತ್ತದೆ. ಬಂಧು– ಬಳಗ, ಪ್ರೀತಿ ವಿಶ್ವಾಸ, ನೋವು–ನಲಿವು, ಮಮತೆ–ಭಾಂಧವ್ಯ ಹರುಷ ಎಲ್ಲವನ್ನು ಈ ಕವಿತೆ ಕಟ್ಟಿಕೊಡುತ್ತದೆ.

"ಕತ್ತಲೆ–ಬೆಳಕು" ಎರಡು ಅಂಶಗಳನ್ನು ಬಿತ್ತರಿಸಿರುವ ಲೇಖಕರು ಭರವಸೆಯ ಬೆಳಕನ್ನು ಪಾರಂಭದಲ್ಲಿಯೇ ಸೂಚಿಸಿದ್ದಾರೆ. ಕತ್ತಲೆಯಿಂದ ಬೆಳಕಿನಡೆಗೆ ಸಾಗಲು ಹಾತೊರೆಯುತ್ತಾ ಒಂದೇ ಕ್ಷಣದಲ್ಲಿ ಬದಲಾವಣೆಯ ಹಂಬಲವನ್ನು ಸೂಚಿಸುತ್ತಾರೆ.

***"ಇರುಳೆಂದು ಕರಗಿತೊ***
***ಬೆಳಕೆಂದು ಮೂಡಿತೋ***
***ರಪ್ಪೆ ಮುಚ್ಚಿ ಬಿಚ್ಚಿ***
***ತೆರೆ ತೆರೆದು ನೋಡೇವು***
***ದೇವರಿಗೆ ಹೋದೆವು"*** [4]

ಶ್ರೀ ಅವರ 'ಪ್ರಾರ್ಥನೆ ಕವಿತೆಯ ಹಾದಿಯಲ್ಲೇ ಸಾಗುವ ಅಂತಹದ್ದೆ ಒಂದು ಹೊಸ ಸಂದೇಶವನ್ನು ಈ ಕವಿತೆ ಸಾರುತ್ತದೆ. "ಕುರುಣಾಳು ಬಾ ಬೆಳಕೆ ಮುಸುಕಿದಿ ಮಬ್ಬಿನಲ್ಲಿ ಕೈ ಹಿಡಿದು ನಡೆಸೆನು' ಎಂಬುದನ್ನು ಮೇಲಿನ ಸಾಲುಗಳು ನೆನಪಿಗೆ

ತರುತ್ತವೆ. ಇರುಳನ್ನು ಇಷ್ಟ ಪಡದೆ ಬೆಳಕಿಗೆ ಸ್ಮರಣೆ ಮಾಡುತ್ತಿದ್ದಾರೆ. ರೆಪ್ಪೆ ಬಿಚ್ಚಿ ತೆರೆ ತೆರೆದು ನೋಡುತ್ತಾ ದೇವರಿಗೆ ಮೊರೆ ಹೋಗುತ್ತಿದ್ದಾರೆ. ಸಾಮಾನ್ಯ ದೃಷ್ಟಿಯಲ್ಲಿ ದೇವರೆಂಬುದು ಒಂದು ಕಾಲ್ಪನಿಕ ಸಂಕೇತವಾದರೂ ಸಹ ಇಲ್ಲಿ ಭರವಸೆಯ ಬೆಳಕಾಗಿ ಮೂಡಿಬಂದಿದೆ.

"ದೇವರಿಗೆ ಹೋದೆವು" ಎಂಬ ಶೀರ್ಷಿಕೆಯೇ ವಿಶೇಷವಾಗಿದೆ. ಇಲ್ಲಿ ನಿರೂಪಕಿ ತಮ್ಮ ಪರಿವಾರದೊಡನೆ ದೇವರಿಗೆ ಹೋಗುತ್ತಿರುವುದು ಕೇವಲ ದೇವರನ್ನು ನೋಡಲು ಅಲ್ಲ ತಮ್ಮ ಜೀವನದ ಪ್ರಮುಖ ಕ್ಷಣಗಳನ್ನು ಸಂತೋಷದಿಂದ ಕಳೆಯಲು, ಸಂತೋಷದ ಮೂಲಕ ಬೆಳಕಿನೆಡೆಗೆ ಸಾಗಲು, ನಾನು ನನ್ನದು ಎಂಬ ಸ್ವಾರ್ಥ ಪ್ರಪಂಚದಲ್ಲಿ "ನಾವು" ಎಂಬ ಪದವನ್ನು ಬಳಸುತ್ತಾ 'ಒಗ್ಗಟ್ಟಿನ' ಮಂತ್ರವನ್ನು ಜಪಿಸುತ್ತಿದ್ದಾರೆ.

***"ಮನೆಮಂದಿ ನೆರೆದೇವು***
***ನೆರೆ ಹೊರೆಯ ಕರೆದೇವು***
***ಒಡಗೂಡಿ ಪಡೆದೇವು***
***ದೇವರಿಗೆ ಹೋದೇವು."***[5]

ಎಂಬ ಮೇಲಿನ ಸಾಲುಗಳು ಅದನ್ನೇ ಸೂಚಿಸುತ್ತಿವೆ. ಒಟ್ಟಿಗೆ ಕೂಡಿ ಬಾಳುವ ಒಟ್ಟಾಗಿ ಬದುಕುವ ಕೆಲಸ ಇಲ್ಲಿ "ದೇವರ ಸ್ಮರಣೆಯ" ಮೂಲಕ ಸಾಗುತ್ತಿದೆ.

ಅಂದಕಾರದ ಕತ್ತಲೆಯಲ್ಲಿ ಬದುಕುತ್ತಿರುವ ಸಮಾಜ ತಮ್ಮಷ್ಟಕ್ಕೆ ತಾವೇ ಹೊರಬರಬೇಕಿದೆ ಇಲ್ಲಿ ಯಾರು ಯಾರನ್ನು ಉದ್ಧರಿಸಲು ಬರುವುದಿಲ್ಲ ಬದಲಾಗಿ ನಮ್ಮನ್ನು ನಾವೇ ಉದ್ದರಿಸಿಕೊಳ್ಳಬೇಕು, ನಮ್ಮೆಲ್ಲ ಕೊಳೆಯನ್ನು ನಾವೇ ತೊಳೆಯಬೇಕು ಹೊಸ ತನವನ್ನು ಮೈಗೂಡಿಸಿಕೊಳ್ಳಬೇಕು

***"ಪುಳಕದಿಂದೆದ್ದು***
***ಹೊಳೆಯಲ್ಲಿ ಮಿಂದೆವು***
***ಹೊಸ ಬಟ್ಟೆ ಉಟ್ಟೇವು***
***ಮುತ್ತೋಲೆ ತೊಟ್ಟೆವು"***[6]

"ಮುತ್ತು ಎಂಬುದು ಇಲ್ಲಿ ಸೌಂದರ್ಯದ ಸಂಕೇತ ಹಾಗೂ ಶ್ರೇಷ್ಠ ಬೆಲೆಯ ವಸ್ತು ಕೂಡ ಹೌದು. ಶ್ರೇಷ್ಠ ಬೆಲೆ ಹಾಗೂ ಸೌಂದರ್ಯ ಬೇಕಿರುವುದು ದೇಹಕ್ಕಲ್ಲ ಬದಲಾಗಿ ಮನಸ್ಸಿಗೆ ಎಂಬುದನ್ನು ಸೂಚಿಸುವ ಸಾಂಕೇತಿಕವಾಗಿ ಕಾಣುತ್ತಿದೆ.

ಕವಿತೆ ಅಂತಿಮದಲ್ಲಿ ಉತ್ತಮ ವಿಚಾರಗಳನ್ನು ಬಿತ್ತರಿಸುತ್ತದೆ,

***"ಸೇಡನ್ನೇ ಇಟ್ಟೇವು***
***ಕೇಡನ್ನೇ ಕಳೆದೇವು"***
***ಹಗುರಾಗಿ ಇಳಿದೇವು***
***ಹೊಸ ಜನುಮ ಪಡೆದೇವು"***[7]

ಮನಸ್ಸಿನ ಅಂಧಕಾರ ತೊಲಗಿಸಿದಾಗ ಸೇಡು, ಕೇಡು. ಇಂತಹ ಭಾವನೆಗಳಿಗೆ ಜಾಗವಿರುವುದಿಲ್ಲ, ದೇವರ ದರ್ಶನದ ನಂತರದಲ್ಲಿ (ಇಲ್ಲಿ ದೇವರೆಂದರೆ ಇನ್ನೊಂದು ಅರ್ಥದಲ್ಲಿ ಶುದ್ಧ ಭಾವವಿರುವ ಮನುಷ್ಯತ್ವ) ಸೇಡು ಕೇಡು ಇವುಗಳು ತೊಲಗಿದಾಗ ಉಳಿಯುವುದು ಹಗುರವಾದ ಮನಸ್ಸು, ಅಹಂಕಾರ ಎನ್ನುವ ಬೆಟ್ಟದ ತುದಿಯಿಂದ ಹರುಷವ ಪಡೆದು ಹಗುರಾಗಿ ಇಳಿದು ಹೊಸ ಜನ್ಮವನ್ನು ಪಡೆಯುವುದು ಪ್ರಸ್ತುತ ಕವಿತೆಯ ಆಶಯ.

ಈ ಸಂಕಲನದ ಮತ್ತೊಂದು ಕವಿತೆಯಾದ "ನಗರ ನಕ್ಸಲರು" ಎಂಬ ಕವಿತೆ ಆಧುನಿಕತೆಯ ಹಳವಂಡಗಳನ್ನು ಕಾಳಜಿ ಭರಿತ ವ್ಯಂಗ್ಯದಲ್ಲಿ ಕಂಡರಿಸುತ್ತದೆ. ಯಂತ್ರ ನಾಗರಿಕತೆ ಕಟ್ಟಿಕೊಟ್ಟ ಸರಕು ಸಂಸ್ಕೃತಿಯ ವಿರೋಧಾಭಾಸಗಳನ್ನು ಕಾಣಿಸುವಾಗಲೆಲ್ಲ ಮೃದು ಲೇಖನಿ ಮೊನಚಾಗುತ್ತದೆ. ನಗರ ಜೀವನದ ಯಂತ್ರ ಸಂಸ್ಕೃತಿಯ ಹೊಸ ಪ್ರಯೋಗಗಳು ಹಳೆ ತಲೆಮಾರಿನ ಶುದ್ಧ ಸಂಸ್ಕೃತಿಯನ್ನು ಬುಡಮೇಲು ಮಾಡುವ, ಮಾಡುತ್ತಿರುವ ವಿನೂತನ ಪರಂಪರೆಯನ್ನು ಇಂದಿನ ನಗರಗಳಲ್ಲಿ ಸುಳಿದಾಡುತ್ತಿದೆ. ನಗರವಾಸಿಗಳಲ್ಲಿ ಕಾಣೆಯಾಗಿರುವ ಪ್ರಕೃತಿ ಪ್ರೇಮ, ಶುದ್ಧ ಪ್ರೀತಿಯ

ವಾತ್ಸಲ್ಯ, ಆಚರಣೆಗಳು, ಇವುಗಳಿಗೆ ಹೊಂದಿಕೊಂಡತೆ ಅಲ್ಲಿ ತಾಂಡವವಾಡುತ್ತಿರುವ "ನಗರ ನಕ್ಸಲರಿಗೆ" ಹೊಸದೊಂದು ವೇದಿಕೆಯನ್ನು ಸೃಷ್ಟಿಮಾಡಿಕೊಟ್ಟಿವೆ. ರಾಮಲಕ್ಷ್ಮಣ, ಸೀತೆ ಎಲ್ಲರೂ ಕಾಡಿನಲ್ಲಿ ಅಲೆದರೂ ಉತ್ತಮ ಸಂಸ್ಕೃತಿಯೊಂದನ್ನು ಕಟ್ಟಲು ನೆರವಾದವರು, ಧರ್ಮವನ್ನು ಉಳಿಸಲು ಹೋರಾಡಿದವರು ಅವರ ನಡೆ–ನುಡಿಗಳಲ್ಲಿ ಸತ್ಯತೆಯ ಅಂಶ ಅಡಗಿತ್ತು. ಉತ್ತಮ ಜನ–ಜೀವನಕ್ಕೆ ಅದು ಸಹಕಾರಿಯಾಗಿತ್ತು. ತಮ್ಮ ಜೀವನದ ಕಷ್ಟಗಳಲ್ಲಿಯೂ ಸಮಾಜದ ಉಳಿವಿಗೆ ಹಾಗೂ ಧರ್ಮಕ್ಕೆ ಹೋರಾಡಿದವರು, ಒಳ್ಳೆಯ ಸಮಾಜ ನಿರ್ಮಾಣಕ್ಕೆ ಅಡಿಪಾಯ ಹಾಕಿದವರು ಆದರೆ ಇಂದಿನ ಜನರ ಮನಸ್ಥಿತಿಯೇ ಬೇರೆಯಾಗಿದೆ. ರಾಮ–ಲಕ್ಷ್ಮಣ, ಪಾಂಡವರ ಜೀವನಕ್ಕೆ ಅದು ತದ್ವಿರುದ್ಧವಾಗಿದೆ ಉತ್ತಮ ಸಮಾಜದ ನಿರ್ಮಾಣದ ಅವಶ್ಯಕತೆ ಇವರಿಗೆ ಬೇಕಿಲ್ಲ ಬದಲಾಗಿ ಸ್ವಾರ್ಥಪರ ಜೀವನ ಎಲ್ಲರನ್ನೂ ಸೆಳೆಯುತ್ತಿದೆ ಭ್ರಷ್ಟಾಚಾರ, ಕೋಮುವಾದ, ಜಾತೀಯತೆಯಂಥ ಅನಿಷ್ಟ ಪದ್ಧತಿಗಳೇ ತಾಂಡವವಾಡುತ್ತಿವೆ.

***"ನಗರದಲ್ಲೋ..............***
***ಆಳರಸರು ಮತ್ತವರ ಕಾಲಾಳುಗಳು***
***ಭಾಷಣ ಭರವಸೆ ಪ್ರಿಯರು***
***ಸಕಲ ವಿದ್ಯೆಯಲ್ಲೂ***
***ಕತಿವರಸೆಯಿಂದ ಕಂಪ್ಯೂಟರೆಗೆ***
***ಪಾರಂಗತರು"*** [8]

ಪ್ರಸ್ತುತ ಸಂದರ್ಭದ ವಾಸ್ತವತೆಯನ್ನು ಕವಯತ್ರಿ ವಿಡಂಭನಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ಅವರ ಮಾತುಗಳಲ್ಲಿ ವ್ಯಂಗ್ಯಾತ್ಮಕ ಚಿತ್ರಣ ಕಂಡುಬರುತ್ತದೆ. ಇಲ್ಲಿ 'ಭಾಷಣ ಭರವಸೆ ಪ್ರಿಯರು' ಎಂಬುದು ಹೆಚ್ಚು ವ್ಯಂಗ್ಯವಾಗಿ ಕೂಡಿರುವ ಸಾಲು ಪ್ರಸ್ತುತ ರಾಜಕೀಯ ನಾಯಕರನ್ನು ಕುರಿತಾದ ಈ ಮಾತು ಅವರ ನೈಜ ವ್ಯಕ್ತಿತ್ವವನ್ನು ಕಟ್ಟಿಕೊಡುವುದರಲ್ಲಿ ಯಾವುದೇ ಸಂದೇಹವಿಲ್ಲ, ಅವರು ಕೇವಲ ಭರವಸೆಯ ಪ್ರಿಯರೆ ಹೊರತು ಅದನ್ನು ಜಾರಿಗೆ ತರುವ ನಂಬಿಕಸ್ತರಲ್ಲ, ಸಮಾಜದ ಒಂದೊಂದು ಘಟನಾವಳಿಗಳ ಹಿಂದೆ ಅವರ ಘೋಮುಖ ವ್ಯಾಘ್ರತನ ಅಡಗಿರುತ್ತದೆ. ಆದರೂ ಅವರು ಸಕಲ ವಿದ್ಯೆಯಲ್ಲೂ ಪಾರಂಗತರು? "ಕತ್ತಿವರಸೆಯಿಂದ ಕಂಪ್ಯೂಟರರೆಗೂ ಪಾರಂಗತರು" ಎಂಬ ಕವಯತ್ರಿಯ ಮಾರ್ಮಿಕ ನುಡಿ, ಅವರ ಕಲಿಕೆಯನ್ನು ಪ್ರಶ್ನೆ ಮಾಡುತ್ತಿದೆ. ಅಷ್ಟೆ ಅಲ್ಲದೆ ಅದನ್ನು ಕಲಿತರೂ ಕೂಡ ಸಮಾಜದ ಕೊಳಕು ನಿರ್ಮಾಣದಲ್ಲಿ ಅವರ ಪಾತ್ರವೇ ಪ್ರಮುಖವಾಗಿರುವುದನ್ನು ಎತ್ತಿ ತೋರಿಸುತ್ತಿದೆ.

ಈ ಎಲ್ಲಾ ಸಮಸ್ಯೆಗಳ ನಡುವೆಯಲ್ಲಿಯೂ ಜನರು ಕೆಂಡದ ಮಳೆಯಲ್ಲಿ ಬೆಂಕಿಯ ಹೊಳೆಯಲ್ಲಿ ಮುಳುಗುತ್ತಿದ್ದಾರೆ. ಬಡ ಜನರ ಕಷ್ಟ ಕಾರ್ಪಣ್ಯಗಳನ್ನು, ಸಾವು–ನೋವುಗಳನ್ನು ಅರ್ಥಪೂರ್ಣವಾಗಿ ಲೇಖಕಿ ಕಟ್ಟಿಕೊಟ್ಟಿದ್ದಾರೆ. ಜೊತೆ–ಜೊತೆಗೆ ಕಾಡಿನ ನಾಶವನ್ನು ಕುರಿತು ಧನಿ ಎತ್ತಿರುವ ಕವಯತ್ರಿ, ಇಂದಿನ ಪರಿಸ್ಥಿತಿಯಲ್ಲಿ ಕಾಡು–ನಾಡುಗಳ ನಡುವಿನ ಅಂತರ ಎಷ್ಟು ಕಡಿಮೆಯಾಗಿದೆ ಕಾಡು–ನಾಡು ಎರಡೂ ಒಂದೇ ಆಗಿದೆ ಮನುಕುಲ ಅಳಿವಿನಂಚಿನಲ್ಲಿದೆ ಎಂಬುದನ್ನು ಸ್ಪಷ್ಟವಾಗಿ ಚಿತ್ರಿಸಿದ್ದಾರೆ.

ಈ ಸಂಕಲನದ ಮತ್ತೊಂದು ವಿಶಿಷ್ಟ ಕವಿತೆಯೆಂದರೆ 'ನಟಿ' ಒಬ್ಬ ಸಾಮಾನ್ಯ ಹೆಣ್ಣಿನ ಚಿತ್ರಣವನ್ನು ಕವಿತೆ ವಿಭಿನ್ನ ಅರ್ಥಗಳೊಂದಿಗೆ ಕಟ್ಟಿಕೊಡುತ್ತದೆ 'ನಟಿ' ಎಂಬ ಪದದಲ್ಲಿ ಅಡಗಿರುವ ಸಾಮಾನ್ಯ ಅರ್ಥ ಆಕೆ ಒಬ್ಬ ಕಲೆಯ ಪ್ರತೀಕ, ನೈಜಾರ್ಥಗಳನ್ನು ಪ್ರತಿಬಿಂಬಿಸುವ ಹಲವು ಆಯಾಮಗಳನ್ನು ಕವಿತೆ ಬಿಚ್ಚಿಡುತ್ತದೆ. ನಟಿಯ ಇನ್ನೊಂದು ಮುಖ ಆಕೆಯೂ ಒಬ್ಬ ಸಾಮಾನ್ಯ ಹೆಣ್ಣು. ನಟಿಯ ಕಾರಣ ಆಕೆಯ ಹೊಟ್ಟೆ ಪಾಡು. ಇಲ್ಲಿ ನಟಿ ಶುದ್ಧತೆಯ ಪ್ರತೀಕವಾಗಿದ್ದಾಳೆ. ಕಲೆಯ ಹಲವು ಮುಖಗಳನ್ನು ಈ ಕವಿತೆ ಓದುಗರ ಮುಂದೆ ಬಿಚ್ಚಿಡುತ್ತದೆ. ಹಾಗೂ ಮನುಷ್ಯನ ಸಾಮಾನ್ಯ ಜೀವನವನ್ನು ಕಟ್ಟಿಕೊಡುತ್ತದೆ. ಅವಳ ಉಡುಗೆ ತೊಡುಗೆ ವೇಷ ಭಾಷೆ ಯಾವುದು ಅವಳದ್ದಲ್ಲ

ಅದೆಲ್ಲವೂ ಅವಳ ವೃತ್ತಿಗೆ ಅನ್ವಯವಾಗಿ ಬಂದಿದೆ ಇತರರ ಹೇಳಿಕೆಯಂತೆ ಅವಳು ಇಲ್ಲಿ ವರ್ತಿಸಬೇಕಾಗಿದೆ. ಇಲ್ಲಿ ಎಲ್ಲವೂ ಬೇರೆಯವರ ಇಚ್ಛೆಯೇ ಆಗಿದೆ. ಹಾಗೂ ಈ ಕವಿತೆ ಜೀವನದ ಸಾರ್ಥಕತೆಯನ್ನು ಕುರಿತು ಹೇಳುತ್ತಿದೆ 'ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ' ಎಂಬ ಮಾತಿನಂತೆ ನಾವು ಪಾತ್ರಧಾರಿಗಳು ಮಾತ್ರ ನಮ್ಮನಾಡಿಸುವ ಸೂತ್ರಧಾರಿ ಎಲ್ಲೋ ಇದ್ದಾನೆ. ಅವನ ಆಟದಂತೆ ನಾವಿಲ್ಲಿ ಅಡಬೇಕಷ್ಟೇ ಎಂಬ ಅಘೋಚರ ಅಂಶವೊಂದನ್ನು ಕವಿತೆ ಕಟ್ಟಿಕೊಡುತ್ತದೆ.

*"ಭಗ್ನವಾಗಿದೆ ನಾಚಿಕೆ*
*ನಗ್ನವಾಗಿದೆ ಬಯಕೆ*
*ಏನೆಲ್ಲಾ ಕೋರಿಕೆ ತೋರಿಕೆ*
*ಪಾತ್ರವೇ ಇಲ್ಲ ಅಘಾತವೆ ಎಲ್ಲಾ!"*[9]

ಎಲ್ಲರ ನಾಚಿಕೆಯೂ ಇಲ್ಲಿ ಭಗ್ನವಾಗಿದೆ. ಮಾಡುವ ಕೆಲಸದ ಮುಂದೆ ಪ್ರತಿಯೊಬ್ಬರ ನಾಚಿಕೆಯೂ ಭಗ್ನವೇ, ಇನ್ನೂ ಬಯಕೆಯಂತು ಎಂದಿಗೂ ನಗ್ನವೇ ಸರಿಯಾದ ರೀತಿಯಲ್ಲಿ ಅದಕ್ಕೆ ಯಾವ ಅವಶ್ಯಕತೆಗೂ ದೊರೆಯುತ್ತಿಲ್ಲ. ಪೂರ್ಣಗೊಳ್ಳದ ಬಯಕೆ ನನ್ನವಾಗಿಯೇ ಉಳಿಸಿದೆ. ಹಾಗೆಯೇ ಇರುತ್ತದೆ ಎಂಬ ಸತ್ಯವನ್ನು ಕವಯತ್ರಿ ಚಿತ್ರಿಸಿದ್ದಾರೆ.

*"ಪ್ಯಾಕಪ್ ಆದ ಮೇಲೆ*
*ಯಾರಿಗಿದೆ ಗೊಡವೆ"*[10]

ಒಬ್ಬ ನಟಿಯ ನರ್ತನೆ ಮುಗಿದ ಮೇಲೆ ಆಕೆಯ ಚಿಂತೆ ಯಾರಿಗೂ ಬೇಡವಾಗುತ್ತದೆ. ನರ್ತಿಸುವ ಸಂದರ್ಭದಲ್ಲಷ್ಟೆ ಅವಳಿಗೆ ಪ್ರಾಮುಖ್ಯತೆ ಹಾಗೆಯೇ ಈ ದೇಹವೆಂಬುದು ಕೊನೆ ಕಂಡಾಗ ಅದರ ಗೊಡವೆಗೆ ಯಾರು ಹೋಗುವುದಿಲ್ಲ ಗೊಡವೆ ಎಂಬುದು ಒಂದೆರಡು ದಿನದ ಮಟ್ಟಿಗಷ್ಟೇ ಮರೆಯಾದ ನಂತರ ಅದೊಂದು ಮರೀಚಿಕೆ.

ಸವಿತಾ ನಾಗಭೂಷಣ ಅವರ ಮತ್ತೊಂದು ಕವನ ಸಂಕಲನ 'ಜಾತ್ರೆಯಲ್ಲಿ ಶಿವ' ಜಾತ್ರೆಯಲ್ಲಿ ಶಿವ ಕವನ ಸಂಕಲನದಲ್ಲಿ ತಂಗಿ ಹುಟ್ಟಿದಳು, ಕೊಂಡ ಹಾಯುವವಳು, ಮತ್ತು ಜಾತ್ರೆಯಲ್ಲಿ ಶಿವ ಎಂಬ ಕವನಗಳನ್ನು ಕುರಿತು ವಿಶ್ಲೇಷಿಸಲಾಗಿದೆ. 'ಜಾತ್ರೆಯಲ್ಲಿ ಶಿವ' ಕವನ ಸಂಕಲನದ ಬಹುತೇಕ ಕವಿತೆಗಳು ಬದುಕನ್ನು ರೂಪಿಸಿಕೊಳ್ಳಲು ಹೆಣಗಾಡುವ ಜೀವನದ ಸತ್ಯತೆಯನ್ನು ಅರ್ಥೈಸಿಕೊಳ್ಳಲು ಹೋರಾಡುವ ಪರಿಯನ್ನು ತಿಳಿಸುತ್ತದೆ. ಇವರ ಕವಿತೆಗಳು ಜಿ.ಎಸ್.ಶಿವರುದ್ರಪ್ಪ, ಕುವೆಂಪು ದೇವನೂರು ಮಹಾದೇವ ಇವರ ಬರವಣಿಗೆಯನ್ನು ನೆನಪಿಗೆ ತರುತ್ತವೆ.

'ತಂಗಿ ಹುಟ್ಟಿದಳು' ಎಂಬ ಕವಿತೆ ಈ ಸಂಕಲನದ ಪ್ರಮುಖ ಕವಿತೆಗಳಲ್ಲಿ ಒಂದು, ಇಲ್ಲಿ ಲೇಖಕಿ ಸಮಾಜದ ಕಟ್ಟುಪಾಡುಗಳನ್ನು ಸಮಾಜದ ಮನಸ್ಥಿತಿಯನ್ನು ತಂಗಿ ಹುಟ್ಟಿದಳು ಕವಿತೆಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಹೆಣ್ಣು ಮಗುವಿನ ಜನನದ ಮೂಲಕ ಕವಿತೆಯ ಪ್ರಾರಂಭವನ್ನು ಸೂಚಿಸಿದರೂ ಸಹ ಅದನ್ನು ಸೂತಕದ ವಾತಾವರಣ ಎಂದು ಕರೆದಿದ್ದಾರೆ, ಸೂತಕದ ವಾತಾವರಣ ಏರ್ಪಡುವುದು ಎಂದರೆ ಅದು ದುಃಖದ ಸಂಕೇತವನ್ನು ಸೂಚಿಸುತ್ತದೆ, ಆದರೆ ಇಲ್ಲಿ ಸೂತಕದ ವಾತಾವರಣ ಏರ್ಪಡುವ ಯಾವುದೇ ಘಟನಾವಳಿಗಳು ಇಲ್ಲ, ಸಂಪ್ರದಾಯದ ದೃಷ್ಟಿಕೋನದಿಂದ ನೋಡಿದಾಗ ಅದು ಸ್ವಲ್ಪ ಸತ್ಯ ಎನಿಸಿದರು. ಅದನ್ನು ಹೊರತು ಪಡಿಸಿ ಮನೆಯಲ್ಲಿ ಸಂಭ್ರಮ ಪಡುವ ವಿಚಾರವೇ ಇದೆ. ಹೆಣ್ಣನ್ನು ದೇವರಿಗೆ ಹೋಲಿಸುವ ಪರಿಕಲ್ಪನೆ ನಮ್ಮಲ್ಲಿ ಪುರಾತನ ಕಾಲದಿಂದಲ್ಲೂ ರೂಢಿಯಲ್ಲಿದೆ ಹೆಣ್ಣಿಗೆ ಅಪಾರವಾದ ಗೌರವವನ್ನು ನೀಡುತ್ತಾ ಬಂದಿದ್ದೇವೆ. ಹೆಣ್ಣನ್ನು ಸಂಸ್ಕೃತಿಯ ಪ್ರತೀಕ, ಮಾತೆ ಎಂದೆಲ್ಲ ಗುರುತಿಸುತ್ತೇವೆ. ಆದರೆ ಇಲ್ಲಿ ಹೆಣ್ಣು ಹುಟ್ಟಿರುವ ಕಾರಣದಿಂದಾಗಿ ಯಾವ ಸಂತೋಷವಿಲ್ಲ ಇಲ್ಲ ತಾಯಿಯ ಎದೆ ಹಾಲು ಕೂಡ ಬತ್ತಿ ಹೋಗುವಂತಹ ರೀತಿಯಲ್ಲಿ ಸಮಾಜ ಹೆಣ್ಣು ಮಗುವನ್ನು ತಿರಸ್ಕರಿಸುತ್ತಿದೆ.

ಜನನದ ಸಂದರ್ಭದಲ್ಲಿ ಎಲ್ಲರಿಗೂ ಸಿಹಿ ಹಂಚುವುದು ವಾಡಿಕೆ ಆದರೆ ಈ ಸಮಾಜದ ದೃಷ್ಟಿಕೋನವನ್ನು ಲೇಖಕರು ವ್ಯಂಗ್ಯವಾಗಿಯೇ ಕಟ್ಟಿಕೊಡುತ್ತಿದ್ದಾರೆ, ಪೇಟೆಯಲ್ಲಿಯ ಮಿಠಾಯಿಯ ಬೆಲೆ ಇದಕ್ಕಿದ್ದಂತೆಯೇ ಹೆಚ್ಚಾಗಿದೆ, ಎಂದರೆ ಸುಖದ ದಿನಗಳು ದೂರ ಸರಿದಿವೆ ಎಂಬ ವಿಚಾರವನ್ನು ಲೇಖಕರು ಈ ಮೂಲಕ ಹೇಳುತ್ತಿದ್ದಾರೆ. ಈ ಸಮಾಜ ಹೆಣ್ಣು ಮಗುವನ್ನು ನೋಡುವ ದೃಷ್ಟಿಕೋನವನ್ನು ಲೇಖಕರು ಹೇಳುತ್ತಿದ್ದಾರೆ. ಮಗುವಿನ ಜನನದ ಸಂದರ್ಭದಲ್ಲಿ ಸಂತೋಷವಾಗಿ ಪದಕಟ್ಟಿ ಹಾಡುವ ಜೀವಗಳು ಕೂಡ ಸುಮ್ಮನೆ ಕುಳಿತಿವೆ, ಅಜ್ಜಿಯ ಗಂಟಲೂ ಕಟ್ಟಿ ಹೋಗಿದೆ ಅದೆ ಗಂಡು ಮಗುವಿನ ಜನನವನ್ನು ಈ ಸಮಾಜ ಆಚರಿಸುವ ರೀತಿಯೇ ಬೇರೆಯಾಗಿರುತ್ತದೆ.

***“ದೂರದಿಂದಲ್ಲಿ ಶುಭ ಕೋರಿದ್ದಾರೆ***
***ಬಂಧುಗಳು***
***ಯಾರೊಬ್ಬರೂ ಸೂಚಿಸಿಲ್ಲ***
***ಮಗುವಿಗೆ ಹೆಸರು”*** [11]

ಸಂಭ್ರಮಿಸಿ ಸಂತೋಷನ್ನು ಹಂಚಿಕೊಳ್ಳಬೇಕಾದ ಬಂಧುಗಳು ದೂರದಿಂದಲ್ಲೇ ಶುಭ ಕೋರಿದ್ದಾರೆ ಎಂಬ ವಿಚಾರವನ್ನು ಲೇಖಕರು ಇಲ್ಲಿ ಆಶ್ಚರ್ಯಕರವಾಗಿ ಸೂಚಿಸುತ್ತಿದ್ದಾರೆ ಬಂಧು ಬಾಂಧವರು ಸೇರಿ ಸಂತೋಷದಿಂದ ಸಂಭ್ರಮಿಸಿ ಮಗುವಿಗೆ ನಾಮಕರಣ ಮಾಡುವುದು ಸಾಂಪ್ರದಾಯಕ ಪದ್ಧತಿ ಆದರೆ ಕವಿತೆಯಲ್ಲಿ ವ್ಯಕ್ತವಾಗಿರುವ ಹೆಣ್ಣಿನ ಬಗೆಗಿನ ಧೋರಣೆಯನ್ನು ಗಮನಿಸುವುದು ಮುಖ್ಯ. ಇಲ್ಲಿ ತಂಗಿ ಹುಟ್ಟಿದಳು ಎಂಬ ಶೀರ್ಷಿಕೆಗೆ ಅನುಗುಣವಾಗಿ ತಂಗಿಯನ್ನು ಅಕ್ಕರೆಯಿಂದ ಅಪ್ಪಿ ಒಪ್ಪಿದವಳು ಒಬ್ಬಳೆ ತಂಗಿಯ ಸಹೋದರಿ ಅಕ್ಕ, ಆಕೆಯೂ ಕೂಡ ಒಂದು ಹೆಣ್ಣಲ್ಲವೇ ಒಪ್ಪಿಕೊಳ್ಳಲೇಬೇಕು. ಹೆಣ್ಣಿನ ಮಹತ್ವವನ್ನು ಹೆಣ್ಣಿನ ವಿಚಾರದಲ್ಲಿ ಈ ಸಮಾಜ ತಾಳಬೇಕಾದ ಧೋರಣೆಯನ್ನು ಆ ಪಾತ್ರಗಳ ಮೂಲಕ ತಿಳಿಯಬಹುದು.

ಈ ಸಂಕಲನದ ಮತ್ತೊಂದು ಕವಿತೆ “ಕೊಂಡ ಹಾಯುವಳು” ಇದು ಇಲ್ಲಿಯ ಪ್ರಮುಖ ಕವಿತೆಗಳಲ್ಲಿ ಒಂದು. ಇದರ ಶೀರ್ಷಿಕೆಯೇ ಓದುಗರಲ್ಲಿ ಕವಿತೆಯ ಮಹತ್ವವನ್ನು ಹೆಚ್ಚಿಸುತ್ತದೆ. “ಕೊಂಡ ಹಾಯುವಳು” ಎಂಬ ಪದ ಬದುಕಿನ ಬವಣೆಯನ್ನು, ಜೀವನದ ಹೊಣೆಗಾರಿಕೆಯನ್ನು ಜವಾಬ್ದಾರಿಯನ್ನು ಮುಂಬರುವ ಭವಿಷ್ಯವನ್ನು ಜೀವನದಲ್ಲಿ ಎದುರಾಗಿರುವ ಕಷ್ಟಗಳ ಸರಮಾಲೆಯನ್ನು ಹೀಗೆ ಜೀವನದ ಹಲವು ಘಟನಾವಳಿಗಳು ಹಾಗೂ ಅನೇಕ ಸಮಸ್ಯೆಗಳನ್ನು ಓದುಗರ ಮುಂದಿಡುತ್ತದೆ. ಒಂದು ಹೆಣ್ಣು ತನ್ನ ಜೀವನವನ್ನು ಕಟ್ಟಿಕೊಳ್ಳಲು ಹೆಣಗಾಡುವ ಸನ್ನಿವೇಶವನ್ನು ಇದು ತೆರೆದು ನಿಲ್ಲಿಸುತ್ತದೆ. ಸಾಮಾನ್ಯವಾಗಿ ಒಂದು ಹೆಣ್ಣಿನ ಜೀವನದಲ್ಲಿ ಆಕೆಯ ಗಂಡನ ಪಾತ್ರ ಮುಖ್ಯವಾಗಿರುತ್ತದೆ. ಅಕೆಯ ನೋವು–ನಲಿವು, ಸುಖ–ದುಖ, ಎಲ್ಲಾ ರೀತಿಯ ಜವಾಬ್ದಾರಿಗಳು ಕೂಡ ಆಕೆಯ ಗಂಡನನ್ನು ಅವಲಂಭಿಸಿರುತ್ತವೆ ಆದರೆ “ಕೊಂಡ ಹಾಯುವವಳು” ಎಂಬ ಕವಿತೆ ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಸಾಗುತ್ತದೆ. ಪಿ.ಲಂಕೇಶ್ ಅವರ “ಅವ್ವ" ಕವಿತೆಯನ್ನು ಇದು ಹೋಲುತ್ತದೆ. “ಕೊಂಡ ಹಾಯುವವಳು” ಕವಿತೆಯಲ್ಲಿ ದೇವರ ಮೊರೆಯನ್ನು ಹೋಗುವ ಅಂಶವನ್ನು ಕಾಣಬಹುದು. ಸವಿತಾ ನಾಗಭೂಷಣ ಅವರ ಅನೇಕ ಕವಿತೆಗಳು ಇದೇ ನಿಟ್ಟಿನಲ್ಲಿ ಸಾಗುತ್ತವೆ. ಕೊಂಡ ಹಾಯುವವಳು ಎಂಬ ಕವಿತೆ ಅವರ 'ಸ್ತ್ರೀ ಲೋಕ' ಎಂಬ ಕಾದಂಬರಿ ನಿಟ್ಟಿನಲ್ಲಿಯೇ ಸಾಗುತ್ತದೆ.

***“ಕಿವಿಗಡಚಿಕ್ಕಾವಂತೆ”***
***ತಮಟೆಯ ಸದ್ದು***
***ಹಾಯುತ್ತಿದ್ದಾರೆ ಕೊಂಡ***
***ಎಲ್ಲರೂ.....”*** [12]

ಎಂಬಲ್ಲಿ ತಮಟೆ ಸದ್ದು’ ಎಂಬ ಪದ ಬದುಕಿನ ಹಲವಾರು ಸಮಸ್ಯೆಗಳನ್ನು ಸೂಚಿಸುತ್ತದೆ. ಗೊಂದಲಗಳನ್ನು ಕಟ್ಟಿಕೊಡುತ್ತದೆ ಆದುದರಿಂದ ಅದನ್ನು ಮೀರಿ ಎಲ್ಲರೂ ಕೊಂಡ ಹಾಯುತ್ತಿದ್ದಾರೆ.

ಕಾರಣ ಜೀವನದಲ್ಲಿ ಎದುರಾಗಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ದಿಟ್ಟ ಬದುಕನ್ನು ರೂಪಿಸಿಕೊಳ್ಳಲು, ಇಲ್ಲಿ 'ಕೊಂಡ' ಎಂಬುದರ ಸಂಕೇತ 'ನಂಬಿಕೆ' ಇದನ್ನು ಎರಡು ಅರ್ಥದಲ್ಲಿ ನಾವು ಗಮನಿಸಬಹುದು. ಕಷ್ಟಗಳು ಎಷ್ಟೇ ಎದುರಾದರೂ ನಂಬಿಕೆಯ ಹೆಸರಿನಲ್ಲಿ ಜೀವನ ಸಾಗಿಸಬೇಕಾಗುತ್ತದೆ. ಜೊತೆಗೆ 'ಕೊಂಡ' ಎಂಬುದು ಕಷ್ಟಗಳನ್ನು ದಾಟಿ ದಿಟ್ಟತನದಿಂದ ಮುಂದೆ ಹೋಗುವ ಪರಿಯೂ ಹೌದು. ಇಲ್ಲಿ ಕೇವಲ ಒಂದು ಹೆಣ್ಣಿನ ಸಂಕಟವನ್ನು ಲೇಖಕರು ಚಿತ್ರಿಸಿಲ್ಲ. ಹಲವು ಸ್ತ್ರೀ–ಪಾತ್ರಗಳು ಇಲ್ಲಿ ತಮ್ಮದೇ ಸಮಸ್ಯೆಗಳನ್ನು ಎದುರಿಸಲು ಸಜ್ಜಾಗಿವೆ. ಗಂಡನ ಬಗ್ಗೆ ಸೂಚನೆ ನೀಡಿರುವ ಲೇಖಕಿ ಆತನನ್ನು ಅಸಹಾಯಕ ಸ್ಥಿತಿಯಲ್ಲಿಯೇ ನೋಡುತ್ತಿದ್ದಾರೆ.

*"ಗಂಡ ಕುಡಿಯುವವನು*
*ನಿತ್ಯ ಹೊಡೆಯುವವನು'*
*ಮೈತುಂಬಾ ಸಾಲ*
*ಮನೆ ತುಂಬಾ ಮಕ್ಕಳು"* [13]

ಸಂಸಾರವನ್ನು ಸಾಕಬೇಕಾದ ಗಂಡ ತನ್ನ ಹೆಂಡತಿಯನ್ನು ಕುಡಿದು ಹೊಡೆಯುತ್ತಾನೆ. ಇಂದಿಗೂ ಪುರುಷ ಪ್ರಧಾನ ಸಮಾಜ ಇರುವುದನ್ನು ಲೇಖಕಿ ಪರೋಕ್ಷವಾಗಿ ಸೂಚಿಸುತ್ತಿದ್ದಾರೆ. ಹೆಂಡತಿಯ ಮೇಲಿನ ಶೋಷಣೆ ಇಂದಿಗೂ ಕೂಡ ನಡೆಯುತ್ತಲೇ ಇದೆ ಎಂಬುವುದನ್ನು ಮೇಲಿನ ಸಾಲುಗಳ ಮೂಲಕ ಲೇಖಕರು ಓದುಗರ ಮುಂದಿಡುತ್ತಾರೆ. ಪುರುಷ ಪ್ರಧಾನ ಸಮಾಜದ ಮತ್ತೊಂದು ಮುಖವನ್ನು ತೆರೆದಿಡುತ್ತದೆ.

*'ಮಿಗಿಲಾಗಿ ಸವತಿಯ ಕಾಟ*
*ಹರಕೆ ಹೊತ್ತಿದಳು'* [14]

ಇಂತಹ ಘಟನಾವಳಿಗಳು ಇಂದಿಗೂ ಸಮಾಜದ ತುಂಬೆಲ್ಲಾ ಹರಡಿ ನಿಂತಿವೆ. ಬದಲಾವಣೆಯ ಸೂಚನೆಗಳೇ ಕಾಣುತ್ತಿಲ್ಲ. ಈ ಕಾರಣವಾಗಿಯೇ ಹೆಣ್ಣು ಕೊಂಡ ಹಾಯುತ್ತಲೇ ಇದ್ದಾಳೆ. ಆದರೆ ತನ್ನ ಜೀವನದಲ್ಲಿ ಬದಲಾವಣೆಯ ಅಂಶಗಳೇ ಕಾಣುತ್ತಿಲ್ಲ. ಆಕೆ ಮಾಡುವುದೆಂತು?

*'ಒಮ್ಮೆ ಮತ್ತೊಮ್ಮೆ*
*ಮಗದೊಮ್ಮೆ ಹಾಯುವಳು ಕೊಂಡ*
*ನೋಡುವನವಳ ಗಂಡ'* [15]

ತನ್ನ ಜೀವನದ ಸುಖದ ದಿನಗಳಿಗಾಗಿ ಬದಲಾವಣೆಯನ್ನು ಬಯಸಿ ಆಕೆ ಮತ್ತೊಮ್ಮೆ ಮಗದೊಮ್ಮೆ ಕೊಂಡ ಹಾಯುತ್ತಲೆ ಇದ್ದಾಳೆ, ನಂಬಿಕೆಯಿಂದ. ಏಕೆಂದರೆ ಇಲ್ಲಿ 'ಕೊಂಡ' ಎಂಬ ಪದದ ಅರ್ಥವೇ ನಂಬಿಕೆ, ಸತ್ಯ ಎಂಬುದಾಗಿದೆ.

ಜಾತ್ರೆಯಲ್ಲಿ ಶಿವ ಸಂಕಲನದ ಮತ್ತೊಂದು ಸುಂದರವಾದ ಕವಿತೆ 'ಜಾತ್ರೆಯಲ್ಲಿ ಶಿವ' ವಿನೂತನ ಶಿವನ ಸಾಕ್ಷಾತ್ಕಾರದೊಡನೆ ಈ ಕವಿತೆ ತೆರೆದುಕೊಳ್ಳುತ್ತದೆ. ಈ ವರೆಗೆ ಕನ್ನಡ ಸಾಹಿತ್ಯದಲ್ಲಿ ಶಿವನನ್ನು ಕಂಡಿರುವ ರೀತಿಗಿಂತ 'ಜಾತ್ರೆಯಲ್ಲಿ ಶಿವ' ಕವಿತೆಯಲ್ಲಿ ಶಿವನ ಚಿತ್ರಣ ಮೂಡಿಬಂದಿರುವ ರೀತಿ ಹೊಸದಾಗಿದೆ.

ಭಾರತೀಯ ಹಿಂದೂ ಧರ್ಮದಲ್ಲಿ ಆ ಕಾಲದಿಂದಲೂ ಶಿವನ ಕಲ್ಪನೆ ಅವನ ಸಾಕ್ಷಾತ್ಕಾರ ಒಂದಲ್ಲ ಒಂದು ರೀತಿ ವಿಶೇಷವಾಗಿಯೇ ಮೂಡಿ ಬರುತ್ತಿದೆ. ಶಿವನ ಪರಿಕಲ್ಪನೆಯನ್ನು ಹೊಸ ಹೊಸದಾಗಿ ಭಕ್ತರೊಂದಿಗೆ ಸಮೀಕರಿಸಿ ಚಿತ್ರಿಸಿರುವ ಹಲವು ಸಾಹಿತ್ಯ ಕೃತಿಗಳನ್ನು ನಾವು ಗಮನಿಸಬಹುದು. 12ನೇ ಶತಮಾನದ ವಚನ ಚಳುವಳಿಯಲ್ಲಿ ಶಿವನ ಪರಿಕಲ್ಪನೆ ಒಂದು ರಿತಿಯದ್ದು, ಅಲ್ಲಿ ಶಿವನ ಪರಿಕಲ್ಪನೆಯನ್ನು ಬೇರೆ ಬೇರೆ ನಾಮಾಂತರಗಳಿಂದ ಸಾಕ್ಷಾತ್ಕಾರಗೊಂಡಿದೆ. ಆ ನಂತರದಲ್ಲಿ ಹರಿಹರನ ರಗಳೆಗಳಲ್ಲಿ ಶಿವನ ಪರಿಕಲ್ಪನೆ ಮತ್ತೊಂದು ರೀತಿಯಲ್ಲಿದೆ. ಭಕ್ತರನ್ನು ಪರೀಕ್ಷಿಸುವ ಅವರ ಕಷ್ಟಗಳಿಗೆ ಮರುಗುವ, ಭಕ್ತರನ್ನು ತನ್ನೊಂದಿಗೆ ಐಕ್ಯಗೊಳಿಸುವ ಅನೇಕ ಚಿತ್ರಣಗಳನ್ನು ನಾವು ಹರಿಹರನ ರಗಳೆಗಳಲ್ಲಿ ಕಾಣಬಹುದು.

ಸವಿತಾ ನಾಗಭೂಷಣ ಅವರು ಕೂಡ ತಮ್ಮ 'ಜಾತ್ರೆಯಲ್ಲಿ ಶಿವ ಎಂಬ ಕವಿತೆಯಲ್ಲಿ ವಿನೂತನ ಶಿವನ ಸಾಕ್ಷಾತ್ಕಾರವನ್ನು ಓದುಗರ ಮುಂದಿಡುತ್ತಾರೆ. ಇಲ್ಲಿ ತಾವು ಕೂಡ ಒಂದು ಪಾತ್ರವಾಗಿ ಶಿವನ ದರ್ಶನವನ್ನು ತೆರೆದಿಡುತ್ತಾರೆ. ಈ ಕವಿತೆಯ ಶೀರ್ಷಿಕೆಯೇ ಒಂದು ರೀತಿಯಲ್ಲಿ ವಿಶೇಷತೆಯನ್ನು ಪಡೆದಿದೆ. ಶಿವ ಸಾಮಾನ್ಯವಾಗಿ ದೇವಾಲಯದಲ್ಲಿ, ಕೈಲಾಸದಲ್ಲಿ ಭಕ್ತರ ಬಳಿಯಲ್ಲಿ ಹೀಗೆ ಮುಖ್ಯವಾಗಿ ಆತ ಕಾಣಿಸಿಕೊಳ್ಳುವ ನೆಲೆ ಬೇರೆಯೇ ಆಗಿರುತ್ತದೆ. ಉಳಿದಂತೆ ರುದ್ರಭೂಮಿಯಲ್ಲಿ ಕೂಡ. ಆದರೆ ಇಲ್ಲಿ ಶಿವ ಜಾತ್ರೆಯಲ್ಲಿ ಕಾಣಿಸಿಕೊಳ್ಳುತ್ತಾನೆ. ಅದು ನಿರೂಪಕಿಯ ಎದುರಿನಲ್ಲೆ. ಶಿವನಿಲ್ಲದ ಸ್ಥಳವಿಲ್ಲ ಶಿವನಿಲ್ಲದ ವಸ್ತುಗಳಿಲ್ಲ ಚರಾಚರಾ ವಸ್ತುಗಳಲ್ಲಿಯೂ ಕೂಡ ಶಿವನಿದ್ದಾನೆ ಎಂಬ ನಂಬಿಕೆ ಇದೆ. ಹಾಗೆಯೇ ಈ ಕವಿತೆಯಲ್ಲಿಯೂ ಕೂಡ, ಇಲ್ಲಿ, ಇಬ್ಬರು ಶಿವನನ್ನು ಕಾಣಬಹುದು ಒಬ್ಬ ಲೌಕಿಕ ಶಿವ, ಮತ್ತೊಬ್ಬ ಪರಶಿವ, ಕವಿತೆ ಎರಡು ಭಾಗಗಳಲ್ಲಿ ಶಿವನನ್ನು ಸಾಕ್ಷಾತ್ಕಾರಗೊಳಿಸುತ್ತದೆ. ಮೊದಲ ಭಾಗದಲ್ಲಿ ಲೌಕಿಕ ಶಿವನ ಘಟನಾವಳಿಗಳು ಓದುಗರ ಕಣ್ಮುಂದೆ ತೆರೆದುಗೊಳ್ಳುತ್ತದೆ.

ಇಲ್ಲಿ ಲೌಕಿಕ ಶಿವ ಪರಿಶಿವನ ರೀತಿಯಲ್ಲಿಯೇ ವೇಷಭೂಷಣ ಧರಿಸಿದ್ದಾನೆ ಇಲ್ಲಿ ಲೇಖಕಿಯೂ ಕೂಡ ಒಂದು ಪಾತ್ರವಾಗಿರುವುದರಿಂದ ಅವರ ಜೊತೆಯಲ್ಲಿಯೇ ಅವರಿದ್ದ ಬಸ್ಸಿನಲ್ಲಿಯೆ ಲೌಕಿಕ ಶಿವನ ಪಯಣ ಸಾಗಿದೆ. ಆತನ ವೇಷಭೂಷಣ ಮೋಡದ ಮೈಬಣ್ಣ ಮುಡಿಗೆ ತಗಡಿನ ಚಂದ್ರ, ತೋಳಿಗೆ ಹೂವು, ಕೊರಳಲ್ಲಿ ಪ್ಲಾಸ್ಟಿಕ್ ಹಾವು, ಹಳದಿ ಬಣ್ಣದ ಕಣಿಗಲೆ ಅರ್ಧ ಲುಂಗಿ, ಹವಾಯಿ ಚಪ್ಪಲಿ, ಹೀಗೆ ಲೌಕಿಕ ಶಿವನ ವೇಷ. ಈ ವೇಷ ವಾದರೂ ಆತನಿಗೆ ಅಗತ್ಯವೇನು ? ಅತನ ಬದುಕಿನ ದಾರಿಯೇ ಹೇಳುತ್ತದೆ ಈ ವೇಷ ಆತನಿಗೆ ಅಗತ್ಯ ಇದೆ ಎಂದು. ಜೀವನ ಪಾಡಿನ ಜಂಜಾಟಕ್ಕಾಗಿ ಆತ ಶಿವನೇ ಆಗಬೇಕಿದೆ. ಕಾರಣ ಶಿವನು ಹಾಗೆಯಲ್ಲವೇ ತನ್ನ ಬದುಕಿನಲ್ಲಿ ಹಲವು ಕಷ್ಟಗಳನ್ನು ಉಂಡವನು. ಸವಿತಾ ನಾಗಭೂಷಣ ಅವರ ಈ ಕವಿತೆ ಕುವೆಂಪು ಅವರ 'ಜಲಗಾರ' ನಾಟಕವನ್ನು ಹೋಲುತ್ತದೆ. ಅಲ್ಲಿಯೂ ಕೂಡ ಜಲಗಾರನೊಂದಿಗೆ ಪರಶಿವನನ್ನು ಸಮೀಕರಿಸಿ ಕುವೆಂಪು 'ಜಲಗಾರ' ನಾಟಕವನ್ನು ಬರೆದಿದ್ದಾರೆ.

ಆದರೆ ಅಲ್ಲಿಯ ಜಲಗಾರ ಅಲ್ಲಿಯ ಪರಶಿವ ಬೇರೆ, ಇಲ್ಲಿಯ ಲೌಕಿಕ ಶಿವ ಮತ್ತು ಪರಶಿವ ಬೇರೆ ಎರಡರಲ್ಲೂ ಬಹಳ ಭಿನ್ನತೆ ಇದೆ. ಕುವೆಂಪು ಅವರು ಊರನ್ನು ಸ್ವಚ್ಚ ಮಾಡುವ ಜಲಗಾರನಲ್ಲಿ ಶಿವನನ್ನು ನೋಡಿದರೆ ಇಲ್ಲಿ ಸವಿತಾ ಒಬ್ಬ ಬಡವನಲ್ಲಿ ಶಿವನನ್ನು ಕಾಣುತ್ತಿದ್ದಾರೆ. ಕವಿತೆಯ ಮೊದಲ ಭಾಗ ಬಹುತೇಕ ಈ ಲೇಖಕಿ ಶಿವನ ಪರಿಚಯದಲ್ಲಿಯೇ ಮುಗಿಯುತ್ತದೆ. ಬಸ್ಸಿನಲ್ಲಿ ತನ್ನೊಟ್ಟಿಗೆ ಬಂದು ತನ್ನೊಟ್ಟಿಗೆ ಇಳಿದ ಆತನನ್ನು ಲೇಖಕಿ ಕೇಳುವ

ನೀನು ಯಾರು ? ಎಂಬ ಪ್ರಶ್ನೆಗೆ ಆತ ನೀಡುವ ಉತ್ತರ ಸೊಗಸಾಗಿದೆ

***"ಡಮರುಗ ನುಡಿಸಿ***
***ತ್ರಿಶೂಲ ಆಡಿಸಿ***
***ಮುಗಿಯುತ್ತದೆ***
***ಕಾಲ್ಗೆಜ್ಜೆ ಗಲಿ ಗಲಿ ಕುಣಿಸಿ***
***ನಾ ಶಿವ ಎಂದ"*** [16]

ಆತ ಲೇಖಕಿಯೆದುರು ತನ್ನ ಪರಿಚಯ ಮಾಡಿಕೊಳ್ಳುವ ಪರಿಯೂ ವಿಶೇಷವಾಗಿಯೇ ಇದೆ ಇಲ್ಲಿ ಯಾವುದೇ ದ್ವಂದ್ವಗಳಿಲ್ಲ. ಆತ ಯಾರಾದರೇನು ವೇಷಭೂಷಣ ಶಿವನೆ ಅಲ್ಲವೆ? ಅಚ್ಚರಿಯ ಸಂಗತಿ ಎಂಬಂತೆ ಲೇಖಕಿ ಎಲ್ಲಿಯೂ ಕೂಡ ಪರಶಿವನನ್ನು ಪರಿಚಯಿಸುವ ಗೋಜಿಗೆ ಹೋಗುವುದಿಲ್ಲ.

ಇಲ್ಲಿಂದ ಮುಂದೆ ಲೇಖಕಿ', ಹಾಗೂ ಶಿವನ ನಿಜವಾದ ಅಸ್ಮಿತೆ ಪ್ರಾರಂಭಗೊಳ್ಳುತ್ತದೆ ಆತನ ಜೀವನ ಶೈಲಿ ಜಾತ್ರೆಯುದ್ದಕ್ಕೂ, ಲೇಖಕಿ ಎದುರೇ ತೆರೆದುಕೊಳ್ಳುತ್ತದೆ. ಅದು ಯಾವುದೋ ಊರಿನಲ್ಲಿ ನಡೆಯುತ್ತಿರುವ ಜಾತ್ರೆಯು ಹೌದು. ಮನುಷ್ಯನ ದಿನನಿತ್ಯದ ಜೀವನದಲ್ಲಿ ನಡೆಯುವ ಜಾತ್ರೆಯೂ ಹೌದು, ಕೇವಲ ಗೊಂದಲಗಳು, ಕ್ಷಣಿಕ ಸಡಗರ,

ಪರಿಚಿತ, ಅಪರಿಚಿತ, ಮುಖಗಳು, ಆಸೆ, ಆಕಾಂಕ್ಷೆ ಎಲ್ಲವೂ ಇಲ್ಲುಂಟು, ಈ ಜಾತ್ರೆಯೊಳಗೆ ಲೌಖಿಕ ಶಿವ ನಡೆದುಕೊಳ್ಳುವ ರೀತಿ ಲೇಖಕಿಯಲ್ಲಿ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ವಸ್ತುಗಳನ್ನು ಕೇಳುವಾಗ ಆತ ನಡೆದುಕೊಳ್ಳುವ ರೀತಿ, ಅಂಗಡಿಯವರೊಂದಿಗೆ ಆತನ ಚೌಕಾಸಿ ವ್ಯಾಪಾರ, ವ್ಯವಹಾರ, ಅವರೊಂದಿಗಿನ ಆತ್ಮೀಯತೆ, ಎಲ್ಲವು ಒಂದೊಂದಾಗಿ ತೆರೆದುಕೊಳ್ಳುತ್ತದೆ. ಕೆಂಪು ನೀರಿನ ಶರಭತ್ತಿನ ಅಂಗಡಿಯಲ್ಲಿ, ಗಿಣಿ ಶಾಸ್ತ್ರದವನೊಂದಿಗೆ ಛತ್ರಿ ಅಂಗಡಿಯಲ್ಲಿ ಹಾಗೆ ಇಡೀ ಜಾತ್ರೆಯ ಉದ್ದಗಲಕ್ಕೂ ಹಬ್ಬಿ ನಿಲ್ಲುತ್ತಾನೆ. ಲೇಖಕಿಯಿಂದ ಸರಿದ ಎನ್ನುವಷ್ಟರಲ್ಲಿ ಮತ್ತೆ ಅವರ ಕಣ್ಮುಂದೆ ಪ್ರತ್ಯಕ್ಷವಾಗುತ್ತಾನೆ.

ಈ ಶಿವ ಏನು, ಪರಶಿವ' ಎನು ಎಲ್ಲಾವೂ ಒಂದೇ ಅಲ್ಲವೇ ಎಂದುಕೊಳ್ಳುವಷ್ಟರಲ್ಲಿ ಮೋಟು ಬೀಡಿ ಸೇದುತ್ತಾ ನಿಂತು ಬಿಡುತ್ತಾನೆ. ಹೀಗೆ ಲೌಕಿಕ ಶಿವನ ಬದುಕು. ಕಷ್ಟ ಸುಖ ನೋವು ನಲ್ಲಿವು ಎಲ್ಲಾವು ಲೇಖಕಿಯ ಎದುರಿನಲ್ಲಿಯೇ ತೆರೆದುಕೊಳ್ಳುತ್ತದೆ.

ತಕ್ಷಣದಲ್ಲಿಯೇ ಲೇಖಕಿ ಎದುರು ಬಂದು ತನ್ನ ಜೀವನದ ಕಷ್ಟಗಳನ್ನು ಅರುಹುತ್ತಾನೆ. ಆತನ ಧ್ವನಿಯಲ್ಲಿ ನೋವಿದೆ ಕಷ್ಟಗಳನ್ನ ಉತ್ಸಾಹದಿಂದ ಎದುರಿಸುವ ಶಕ್ತಿಯೂ ಇದೆ ಆದರೂ ಅದನ್ನು ನೀಗಿಸಲು ಇನ್ನೊಬ್ಬರ ಮುಂದೆ ಕೈ ಒಡ್ಡಲೇಬೇಕು. ಒಂದರ್ಥದಲ್ಲಿ ಪರಶಿವನೂ ಭಿಕ್ಷುಕನೇ ಅಲ್ಲವೇ ಪರಶಿವ ಮಹಾ ಭಿಕ್ಷುಕನೇ ಹೌದು, ಹಾಗೇ ನೋಡಿದರೆ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಭಿಕ್ಷುಕರೆ, ಇಲ್ಲಿ ಲೌಕಿಕ ಶಿವ ಲೇಖಕಿಯ ಎದುರು ಕೈಯೊಡ್ಡಿ ನಿಂತಿದ್ದಾನೆ.

***"ಗಣಪ ಹಸಿದಿದ್ದಾನೆ.***
***ಗಿರಿಜೆಗೆ ಕಾಯಿಲೆ***
***ಹೆಂಡತಿ ಮಕ್ಕಳಿಗಾಗಿ***
***ಶಿವನಲ್ಲಿದೆ ಭವಿ ಅಳುವನಿ"*** [17]

ಇಲ್ಲಿ ಆತ ಅಳುತ್ತಿರುವುದು ತನ್ನ ಜೀವನ ಸಂತೋಷಕ್ಕಾಗಿ ಅಲ್ಲಿ ಗಣಪನ ಹಸಿವಿಗೆ, ಗಿರಿಜೆಯ ಕಾಯಿಲೆಗೆ, ಹೆಂಡತಿ–ಮಕ್ಕಳಿಗಾಗಿ ಬದುಕುವ ಬದುಕು ಒಂದರ್ಥದಲ್ಲಿ ಹೆಚ್ಚು ಖುಷಿಯನ್ನೇ ನೀಡುತ್ತದೆ. ಲೇಖಕಿ ತನ್ನ ಪುಟ್ಟ ಪರ್ಸಿನಿಂದ ಐದರ ನೋಟನ್ನು ತೆಗೆದು ಆತನಿಗೆ ಇಷ್ಟೇ ಎಂದು ನೀಡಿದಾಗ ಆತನ ಖುಷಿಗೆ ಮಿತಿಯೇ ಇಲ್ಲ. ಏಕೆಂದರೆ ಆತ ಶಿವ, ಆತನಿಗೆ ದುರಾಸೆಯಿಲ್ಲ ಜೀವನದ ಒಂದೊಂದು ಘಟನೆಯನ್ನು ಆತ ಅನುಭವಿಸಿದ್ದಾನೆ. ತಾನು ನೋವುಂಡವನಾದ್ದರಿಂದ ಇರುವುದರಲ್ಲಿಯೇ ಖುಷಿ ಪಡುತ್ತಾನೆ.

***"ಮಿಂಚಿನಂತೆ ಹೊಳೆದು***
***ತಕಾಂಗೂ ತದಿಗಿಣ ತೂಂ ಎಂದು***
***ನಾಟ್ಯದ ಮಟ್ಟಿನಲ್ಲಿ ಕುಣಿದು***
***ಅರ್ಧ ನಿಮೀಲಿತ ನೇತ್ರನಾಗಿ***
***ನಟರಾಜ ಭಂಗಿಯಲ್ಲಿ ನಿಂತುಬಿಟ್ಟ"*** [18]

ಇಲ್ಲಿ ಈ ಭಾಗ ತುಂಬಾ ಮುಖ್ಯವಾದುದು, 'ಪರಶಿವ ಮತ್ತು ಲೌಕಿಕ ಶಿವನ ನಡುವಿನ ಅಂತರ ಕಡಿದು ಹೋಗಿ ಇಬ್ಬರೂ ಒಬ್ಬರಾಗುವ ದಿವ್ಯ ಕ್ಷಣ, ಶಿವ ಎಂಬ ಅರ್ಥದಲ್ಲಿ ಲೌಕಿಕ ಶಿವನ ಆ ಚಟುವಟಿಕೆಗಳು ಪರಶಿವನಿಗೆ ಹೋಲಿಕೆಯಾಗುವ ನೈಜ ಸ್ವರೂಪವನ್ನು ಇಲ್ಲಿ ಪಡೆದುಕೊಳ್ಳುತ್ತೇವೆ.

ಇಲ್ಲಿ ಜಾತ್ರೆಯ ಶಿವನಿಂದ ಸಾಕ್ಷಾತ್ 'ಪರಶಿವ'ನಿಗೆ ಮಾನ್ಯತೆ ಬಂದಿದೆ ಜಾತ್ರೆಯ ಶಿವನೇ ಪರಶಿವನಗಿದ್ದಾನೆ. ಇನ್ನೊಂದೆಡೆ ಶಿವನಾಗುವುದರ ಅರ್ಥ ಎಲ್ಲವನ್ನು ಸಹಿಸುವುದು ಶಿವ–ಶಾಂತಿಯ ಸಂಕೇತವೂ ಹೌದು, ರುದ್ರ ರೂಪನೂ ಹೌದು. ಎಲ್ಲವನ್ನು ಸಹಿಸುವ ಶಕ್ತಿ ಇದ್ದವನೇ ಶಿವನಾಗುತ್ತಾನೆ. ಇಲ್ಲಿ ಲೌಕಿಕ ಶಿವ ಲೇಖಕಿಯೆದುರು ಸಾಕ್ಷಾತ್ ಶಿವ.. ಮತ್ತೆ ಸಾಕ್ಷಾತ್ ಶಿವ. ಬದುಕಿನ ಜಂಜಾಟದಲ್ಲಿಯೂ ನಿಷ್ಠೆಯಿಂದ ಸರಳವಾಗಿ ಪ್ರಾಮಾಣಿಕವಾಗಿ ಬದುಕು ಕಟ್ಟಿಕೊಳ್ಳುವ ಸುಂದರ ಮಾನವೀಯ ಘಟನೆಯನ್ನು ಈ ಕವಿತೆ ಸಾಕ್ಷಾತ್ಕಾರಗೊಳಿಸುತ್ತದೆ.

**ಸಮಾರೋಪ**

ತಿಳಿದಂತೆ ಮಾಡು ನಡೆದಂತೆ ಜಾಡು' ಎಂಬ ನಂಬಿಕೆಯಲ್ಲಿ ನಿರುಮ್ಮಳವಾಗಿ ಹರಿಯುವ

ನದಿಯಂತೆ ಸವಿತಾ ನಾಗಭೂಷಣ ಅವರ ಕವಿತೆಗಳು ಕನ್ನಡ ಕಾವ್ಯ ಸಂದರ್ಭದಲ್ಲಿ ತಮ್ಮ ಅನನ್ಯ ಚಹರೆಗಳನ್ನು ಬಿಂಬಿಸಿವೆ. ಉಸಿರಾಟಕ್ಕೊಂದು ಸಹಜ ಲಯವಿರುವಂತೆ ಅವರ ಕವಿತೆಗಳ ಸುತ್ತಲೂ ಸಹೃದಯ ಮನಸ್ಸು ಆವರಿಸಿಕೊಂಡಿದೆ. ಸವಿತಾ ನಾಗಭೂಷಣ ಅವರು ಸೂಕ್ಷ್ಮ ಮನಸ್ಸಿನ ಕಾವ್ಯ ಸಂವೇಧನೆಯ ಮೂಲಕ ಗುರುತಿಸಲ್ಪಟ್ಟವರು, ಹೆಚ್ಚು ವಿಮರ್ಶೆಯ ಗೊಂದಲಗಳಿಗೆ ಗೂಡಾಗದೆ ತಾನಾಯಿತು ತನ್ನ ಬರಹವಾಯಿತು ಎಂಬ ನಿರ್ಲಿಪ್ತತತೆಯಲ್ಲಿ ತನ್ನ ಅನುಭವ ನೆನಪುಗಳಿಗೆ ಕವಿ ಭಾಷೆಯ ಉಡುಗೆ ತೊಡಿಸಿ ತಮ್ಮ ಕವಿತೆಗಳನ್ನು ರಚಿಸಿದ್ದಾರೆ. ಸಹೃದಯ ಮನಸ್ಸು ಕವಿತೆಯ ಜಾಡು ಹಿಡಿದು ಹಿಂಬಾಲಿಸಲು ಕೊಂಚವೂ ಕಷ್ಟವಾಗದ ಹಾಗೆ ಅವರ ಬರವಣಿಗೆಯ ಶೈಲಿ ನವಿರಾಗಿದೆ, ಅಷ್ಟೇ ಪ್ರಬುದ್ಧವಾಗಿದೆ. ಅವರ 'ದೇವರಿಗೆ ಹೋದೆವು' ಮತ್ತು 'ಜಾತ್ರೆಯಲ್ಲಿ ಶಿವ' ಕವನ ಸಂಕಲನಗಳಲ್ಲಿ ಬಡತನ, ಹಸಿವು, ಯುದ್ಧ, ಶಾಂತಿ, ಡಾಂಭೀಕತೆ ಹೀಗೆ ಹಲವು ವಸ್ತುಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. 'ದೇವರಿಗೆ ಹೋದೆವು' ಕವನ ಸಂಕಲನದಲ್ಲಿರುವ ಅನೇಕ ಕವಿತೆಗಳು ಅವರ ಅಂತಃಕರಣ ಭಾವನವನ್ನು ಅಭಿವ್ಯಕ್ತಗೊಳಿಸುವ ಸಾಮಾನ್ಯ ಓದುಗನಿಗು ಸಹಜವಾಗಿ ತಲುಪುವ ರಚನೆಗಳಾಗಿವೆ. ಜಾತ್ರೆಯಲ್ಲಿ ಶಿವ, ತಂಗಿ ಹುಟ್ಟಿದಳು, ಕೊಂಡ ಹಾಯುವವಳು ಇಂತಹ ಕವನಗಳು ಅವರ ಅಂತರ್ ದೃಷ್ಟಿಗೆ ಸಾಕ್ಷಿಯಾಗಿದೆ. ಇವು ಅರ್ಥಪೂರ್ಣವಾದ ತಿಳಿವಿನ ಘಟ್ಟ ವ್ಯಕ್ತಿಯೊಳಗೆ ದೇವರು ದೇವರೊಳಗೆ ವ್ಯಕ್ತಿ ಬಿಂಬಿತಗೊಳ್ಳುವ ಪರಿಣಾಮಕಾರಿ ಕವನಗಳಾದ ಇವು ಕಾವ್ಯದ ಬಗ್ಗೆ ಕವಿಗೆ ಇರುವ ಅಳವಾದ ಎಚ್ಚರ ಮತ್ತು ಸಾಧಕ ಪ್ರಜ್ಞೆಯನ್ನು ಬಿಂಬಿಸುತ್ತವೆ. ಅಲ್ಲದೆ ಈ ಕಾರಣದಿಂದಾಗಿಯೇ ಓದುಗರಲ್ಲಿ ಬಹುಕಾಲ ಉಳಿದು ಬಿಡುತ್ತವೆ.

**ಕೊನೆಟಿಪ್ಪಣಿಗಳು**

1. ಸವಿತಾ ನಾಗಭೂಷಣ. (2006). *ಕಾಡು ಲಿಲ್ಲಿಯ ಹೂಗಳು.* (ಮುನ್ನಡಿ) ಪು. 17
2. ಅದೇ. ಪು. 9
3. ಗೀತಾ ವಸಂತ. *ಬೇಲಿಯ ಹಂಗಿಲ್ಲದೆ ಹರಡುವ ಹೂವು* (ಅಂತರ್ಜಾಲತಾಣ ಮಾಹಿತಿ)
4. ಸವಿತಾ ನಾಗಾಭೂಷಣ. (2018). *ದೇವರಿಗೆ ಹೋದವು.* ಪು. 47
5. ಅದೇ. ಪು. 47
6. ಅದೇ. ಪು. 47
7. ಅದೇ. ಪು. 48
8. ಅದೇ. ಪು. 89
9. ಅದೇ. ಪು. 115
10. ಅದೇ. ಪು. 115
11. ನಾಗಭೂಷಣ ಡಿ.ಎಸ್. (2011) *ಸವಿತಾ ನಾಗಭೂಷಣ ಅವರ ಆಯ್ದ ಐವತ್ತು ಕವನಗಳು* ಪು. 59
12. ಅದೇ. ಪು. 64
13. ಅದೇ. ಪು. 64
14. ಅದೇ. ಪು. 64
15. ಅದೇ. ಪು. 65
16. ಅದೇ. ಪು. 68
17. ಅದೇ. ಪು. 70
18. ಅದೇ. ಪು. 70

**ಪರಾಮರ್ಶನ ಗ್ರಂಥಗಳು**


- ಗೀತಾ ವಸಂತ. *ಬೇಲಿಯಾ ಹಂಗಿಲ್ಲದೆ ಹರಡುವ ಪರಿಮಳ* (ಜಾಲತಾಣ ಮಾಹಿತಿ)
- ನಾಗಭೂಷಣ ಡಿ.ಎಸ್. (2011). *ಸವಿತಾ ನಾಗಭೂಷಣ ಅವರ ಆಯ್ದ ಐವತ್ತು ಕವನಗಳು.* ಇಳಾ ಮುದ್ರಣ.
- ಸವಿತಾ ನಾಗಭೂಷಣ. (2018). *ದೇವರಿಗೆ ಹೋದೇವು.* ರೂಪ ಪ್ರಕಾಶನ.
- ಸವಿತಾ ನಾಗಭೂಷಣ. (2006). *ಕಾಡುಲಿಲ್ಲಿಯ ಹೂಗಳು.* ರೂಪ ಪ್ರಕಾಶನ.